## ಕರ್ನಾಟಕ ಸರ್ಕಾರ

ಸಂಖ್ಯೆ: ತಾಂತ್ರಿಕ.ಆಡಳಿತ.ಸುತ್ತೋಲೆ.೪:೨೦೦೧-೨೦೦೨.

ನಿರ್ದೇಶಕರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಬೆಂಗಳೂರು, ದಿ:೨೫.೫.೨೦೦೧.

### ಸುತ್ತೋಲೆ

ವಿಷಯ:- ಮೂಲ ದಾಖಲೆಗಳ ಧೃಡೀಕೃತ ನಕಲುಗಳನ್ನು ನೀಡುವ ಬಗ್ಗೆ ಕೆಲವು ಸೂಚನೆಗಳು.

ಉಲ್ಲೇಖ:- ೧) ಟಿ.ಎನ್.ಎಲ್.ಇತರೆ.೩೨:೭೨-೭೩, ದಿ:೫.೩.೭೪.

೨) ಟಿ.ಎನ್.ಎಲ್.ಎಡಿಎಂ.೬೨:೯೦-೯೧, ದಿ:೫.೬.೧೯೯೧

ooo

ಮೂಲ ಸರ್ವೆ ದಾಖಲೆಗಳ ಕೆಲವು ಧೃಡೀಕೃತ ನಕಲುಗಳನ್ನು ಸಾರ್ವಜನಿಕರಿಗೆ ಕರ್ನಾಟಕ ಭೂಕಂದಾಯ ನಿಯಮಗಳು ೧೯೬೬ರ ನಿಯಮ ೧೪೦ ರನ್ವಯ ಕೊಡಲಾಗುತ್ತಿದೆ ಹಾಗೂ ಉಲ್ಲೇಖದನ್ವಯ ಮಾರ್ಗಸೂಚಿಗಳನ್ನೂ ಸಹ ನೀಡಲಾಗಿದೆ. ಉಲ್ಲೇಖದಲ್ಲಿನ ಸುತ್ತೋಲೆಗಳಲ್ಲಿ ಸಾರ್ವಜನಿಕರಿಗೆ ಯಾವ ದಾಖಲೆಗಳು ನೀಡಬಹುದು ಹಾಗೂ ನೀಡಬಾರದು ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ಕೆಲವು ಸಾರ್ವಜನಿಕರು ತಮ್ಮದಲ್ಲದೇ ಇರುವ ಜಮೀನುಗಳ ಧೃಡೀಕೃತ ದಾಖಲೆಗಳನ್ನು ಪಡೆಯುತ್ತಿರುವುದು ಹಾಗೂ ಸದರಿ ಜಮೀನುಗಳ ಬಗ್ಗೆ ಅನಧಿಕೃತ ದಾಖಲೆಗಳನ್ನು ಸೃಷ್ಟಿಸಿ ವಿವಾದಗಳನ್ನು ಸೃಷ್ಟಿಸುತ್ತಿರುವುದು ಮತ್ತು ಬೆಲೆ ಬಾಳುವ ಸಾರ್ವಜನಿಕ, ಸರ್ಕಾರಿ, ಆಸ್ತಿಗಳನ್ನು ಕಬಳಿಸಲು, ದುರುಪಯೋಗಪಡಿಸಿಕೊಳ್ಳುತ್ತಿರುವುದು ಮಾನ್ಯ ನಿರ್ದೇಶಕರ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಉಲ್ಲೇಖದ ಸುತ್ತೋಲೆಗಳನ್ನು ಪರಿಶೀಲಿಸಲಾಗಿ ಇಲಾಖೆ ಕೆಲವು ಅನಗತ್ಯ ಮಾಹಿತಿಗಳನ್ನು ಸಾರ್ವಜನಿಕರಿಗೆ ನೀಡುತ್ತಿದ್ದು, ಸದರಿ ಮಾಹಿತಿಯನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಕಾರಣ ಈ ಅಂಶಗಳನ್ನು ತೀಕ್ಷ್ಣವಾಗಿ ಪರಿಗಣಿಸಿ ಉಲ್ಲೇಖದ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ರದ್ದುಗೊಳಿಸಿ ಈ ಕೆಳಗಿನಂತೆ ಪರಿಷ್ಕೃತ ಸೂಚನೆಗಳನ್ನು ನೀಡಲಾಗಿದೆ.

(೧) ಸರ್ಕಾರಿ : ಸಾರ್ವಜನಿಕ ಸ್ವತ್ತುಗಳ ನಕಲುಗಳನ್ನು ಯಾವುದೇ ವ್ಯಕ್ತಿಗಳಿಗೆ ನೀಡತಕ್ಕದ್ದಲ್ಲ.

(೨) ಈ ಕೆಳಕಂಡ ಮೂಲ ಸರ್ವೆ ದಾಖಲೆಗಳ ನಕಲುಗಳನ್ನು ಮಾತ್ರ ನಿಯಮಾನುಸಾರ ವಿತರಿಸಲು ತಿಳಿಸಲಾಗಿದೆ.

ಅ) ಮೂಲ ಹಾಗೂ ರೀಸರ್ವೆ ಟಿಪ್ಪಣಿಯ ನಕಲುಗಳು — ಕೊಡಬಹುದಾಗಿದೆ.

ಆ) ಒರಿಜಿನಲ್ : ರೀ ಸರ್ವೆ ನಕಾಶೆ — ಲಭ್ಯವಿದ್ದಲ್ಲಿ ಕೊಡಬಹುದಾಗಿದೆ.

ಇ) ಫೂಟ್ ಖರಾಬಿನ ಗುರ್ತುಗಳನ್ನು ಟಿಪ್ಪಣಿ ಅಥವಾ ಇತರೆ ನಕಲುಗಳಲ್ಲಿ ತೋರಿಸುವ ಬಗ್ಗೆ — ಫೂಟ್ ಖರಾಬ್ ಗುರ್ತುಗಳನ್ನು ಸ್ಕೇಲಿಗೆ ಡ್ರಾ ಮಾಡಲಾದ ನಕ್ಷೆಗಳಲ್ಲಿ ಮಾತ್ರ ತೋರಿಸಬಹುದಾಗಿದೆ ಮತ್ತು ಸದರಿ ಖರಾಬ್ ಗುರ್ತುಗಳ ಬಗ್ಗೆ ನಿಖರವಾದ ಅಳತೆಗಳಿರುವುದಿಲ್ಲ ಎಂಬ ಷರಾ ಬರೆಯತಕ್ಕದ್ದು.

| | | |
|---|---|---|
| (ಈ) ಹದ್ದುಬಸ್ತು ಪ್ರಕರಣಗಳಲ್ಲಿ ಭೂಮಾಪಕರಿಂದ ತಯಾರಿಸಲಾದ ನಕ್ಷೆ. | — | ಹದ್ದುಬಸ್ತು ನಕ್ಷೆ ಮತ್ತು ಅಳತೆ ಕಾಲದಲ್ಲಿ ಪಡೆಯಲಾದ ಹೇಳಿಕೆ ಮತ್ತು ಮಹಜರ್ ಪ್ರತಿಗಳ ನಕಲುಗಳನ್ನು ನೀಡಬಹುದಾಗಿದೆ. |
| (ಉ) ಅರ್ಜಿದಾರರು ಇಲಾಖೆಗೆ ನೀಡಿದ ಅರ್ಜಿಯ ನಕಲುಗಳು ಮತ್ತು ಇಲಾಖೆಯಿಂದ ನೀಡಲಾದ (ನೋಟೀಸು) ತಿಳುವಳಿಕೆ ನಕಲುಗಳು. | — | ಕೊಡಬಹುದಾಗಿದೆ. |
| (ಊ) ಯಾವುದೇ ಸಾರ್ವಜನಿಕರ ತಕರಾರು ಅಥವಾ ಮೇಲ್ಮನವಿ ಪ್ರಕರಣಗಳಲ್ಲಿ ಅಂತಿಮ ಆದೇಶ ಮಾಡುವುದಕ್ಕಿಂತ ಮೊದಲು ತಯಾರಿಸಲಾದ ನಕ್ಷೆ ಹೇಳಿಕೆ, ಮಹಜರು ನಕಲುಗಳು. | — | ಅಂತಿಮ ಆದೇಶ ಆಗುವವರೆಗೆ ನಕಲುಗಳನ್ನು ಕೊಡುವಂತಿಲ್ಲ. |
| (ಋ) ಹಿಸ್ಸಾ ಸರ್ವೆ ದಾಖಲೆಗಳ ನಕಲುಗಳು. | — | ಹಿಸ್ಸಾ ಸರ್ವೆ, ಟಿಪ್ಪಣಿ ಮತ್ತು ಅಟ್ಲಾಸು ನಕಲುಗಳನ್ನು ಮಾತ್ರ ಕೊಡಬಹುದಾಗಿದೆ. |
| (ೠ) ಆಕಾರಬಂದ್ ನಕಲುಗಳು | — | ಕೊಡಬಹುದಾಗಿದೆ. |

ಈ ಮೇಲ್ಕಂಡ ದಾಖಲೆಗಳನ್ನು ಮಾತ್ರ ಸಾರ್ವಜನಿಕರಿಗೆ ನೀಡತಕ್ಕದ್ದು. ಜೊತೆಗೆ, ಈ ದಾಖಲೆಗಳನ್ನು ನೀಡುವ ಕಛೇರಿಗಳಲ್ಲಿ ಫೋಟೋ ಕಾಪಿ ಯಂತ್ರ ಇದ್ದು, ಸುಸ್ಥಿತಿಯಲ್ಲಿ ಇದ್ದಲ್ಲಿ, ಯಾವ ಕಾರಣಕ್ಕೂ ಕೈ ಬರಹ ನಕಲುಗಳನ್ನು ನೀಡತಕ್ಕದ್ದಲ್ಲ — ಕೇವಲ ಫೋಟೋ ಕಾಪಿ ಯಂತ್ರದ ನಕಲನ್ನೇ ನೀಡತಕ್ಕದ್ದು. ಇದಲ್ಲದೇ ಎಲ್ಲಿ ಕೈ ಬರಹದ ಪ್ರತಿಗಳನ್ನು ನೀಡುವುದು ಅನಿವಾರ್ಯವಾಗುವುದೋ ಅಲ್ಲಿ ಇದಕ್ಕೋಸ್ಕರ ಎರಡನೇ ದರ್ಜೆ ಭೂಮಾಪಕರನ್ನು ಆದರಲ್ಲೂ ಬೇಕಾಗಿ ಮಹಿಳಾ ಎರಡನೇ ದರ್ಜೆ ಭೂಮಾಪಕರವರನ್ನು ಉಪಯೋಗಿಸುತ್ತಿರುವುದನ್ನು ಗಮನಿಸಲಾಗಿದೆ. ಇದರಿಂದ ಕ್ಷೇತ್ರ ಮಟ್ಟದ ಪೋಡಿ ಪ್ರಕರಣದ ವಿಲೇಯು ಕುಂಠಿತವಾಗಿದ್ದು, ಅದಷ್ಟು ಎರಡನೇ ದರ್ಜೆ ಭೂಮಾಪಕರು ಅಥವಾ ಇನ್ನಾವುದಾದರೂ ವೃಂದದ ಕ್ಷೇತ್ರ ಮಟ್ಟದ ನೌಕರರನ್ನು ಉಪಯೋಗಿಸತಕ್ಕದ್ದಲ್ಲ. ಈ ಕೆಲಸಕ್ಕಾಗಿ ಸಾಮಾನ್ಯವಾಗಿ ಎರಡನೇ ದರ್ಜೆ ಸಹಾಯಕರು ಅಥವಾ ಪ್ರಥಮ ದರ್ಜೆ ಸಹಾಯಕರನ್ನು ಮಾತ್ರ ನಿಯೋಜಿಸತಕ್ಕದ್ದು.

ಈ ಸೂಚನೆಗಳು ತಕ್ಷಣದಿಂದ ಜಾರಿಗೆ ಬರುತ್ತವೆ ಹಾಗೂ ಈ ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು. ಸುತ್ತೋಲೆ ತಲುಪಿದ ಬಗ್ಗೆ ಸ್ವೀಕೃತಿ ಕಳುಹಿಸಿಕೊಡಲು ಸೂಚಿಸಿದೆ.

(ಎ.ಕೆ. ಪೊನ್ನಪ್ಪ)
ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪ್ರತಿಯನ್ನು:—

(೧) ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
(೨) ತಾಲ್ಲೂಕು ಭೂಮಾಪನಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.